# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 342
2. ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ
3. ಉತ್ತರಿಸಬೇಕಾದ ದಿನಾಂಕ : 16.02.2023

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿಗೆ ಹೇಮಾವತಿ ನದಿಯಿಂದ ನಾಲೆಯ ಮೂಲಕ ಕೆರೆಗಳಿಗೆ ನೀರನ್ನು ಹರಿಸುವ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; | ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಕಿ.ಮೀ 192.30 ನಿಂದ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಹಾಗೂ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುತ್ರಿದುರ್ಗ ಹೋಬಳಿಯ 83 ಕೆರೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಯ ರೂ. 277.50 ಕೋಟಿಗಳ ಮೊತ್ತದ ಯೋಜನಾ ವರದಿಗೆ ದಿನಾಂಕ:28-02-2014ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ದಿನಾಂಕ:26.12.2015 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಗ್ರಾವಿಟಿ ಮೈನ್ ನಾಲಾ ಪಥ ಹಾಗೂ ಪೈಪ್‌ಗಳ ಬದಲಾವಣೆ ಮುಂತಾದ ಕಾರಣಗಳಿಂದ ಉಂಟಾದ ಪರಿಷ್ಕೃತ ಅಂದಾಜನ್ನು ರೂ.450.00 ಕೋಟಿಗಳಿಗೆ ದಿನಾಂಕ:15-09-2020 ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.<br><br>ಸದರಿ ಯೋಜನೆಯ ಪ್ರಸ್ತುತ ಹಂತದ ವಿವರಗಳು ಈ ಕೆಳಗಿನಂತಿದೆ:-<br>• ಪಂಪ್ ಹೌಸ್ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>• 66/6.6 ಕೆ.ವಿ. ಸಬ್‌ಸ್ಟೇಷನ್‌ನ ಸಿವಿಲ್ ಕಾಮಗಾರಿಗಳು ಮುಗಿದಿದ್ದು, ವಿದ್ಯುತ್ ಉಪಕರಣಗಳನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.<br>• ರೈಸಿಂಗ್ ಮೇನ್-1 : 22.41 ಕಿ.ಮೀ. ಪೈಪ್‌ಗಳ ಉದ್ದದ ಪೈಕಿ 13.87ಕಿ.ಮೀ.ಗಳ ಪೈಪ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>• ರೈಸಿಂಗ್ ಮೇನ್-2: 15.50 ಕಿ.ಮೀ. ಪೈಪ್‌ಗಳ ಉದ್ದದ ಪೈಕಿ 8.39 ಕಿ.ಮೀ.ಗಳ ಪೈಪ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>• ಉಳಿಕೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಈವರೆಗೂ ರೂ.138.23 ಕೋಟಿಗಳ ವೆಚ್ಚವಾಗಿರುತ್ತದೆ. |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಆ) | 2014 ರಲ್ಲಿ ಪ್ರಾರಂಭವಾದ ಈ ಕಾಮಗಾರಿಯು ಪೂರ್ಣಗೊಳ್ಳಲು ವಿಳಂಬವಾಗುತ್ತಿದ್ದು, ಕಾಮಗಾರಿಯು ತ್ವರಿತವಾಗಿ ಪೂರ್ಣಗೊಳ್ಳಲು ಸರ್ಕಾರ ಏನು ಕ್ರಮಕೈಗೊಂಡಿದೆ; | ಸದರಿ ಕಾಮಗಾರಿಯ ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿದೆ:-<br>• ಗ್ರಾವಿಟಿ ಮೈನ್‌ನಲ್ಲಿ PSC ಪೈಪ್‌ಗಳನ್ನು ಅಳವಡಿಸಲು ಮೂಲ ಅಂದಾಜಿನಲ್ಲಿ ನಿಗದಿಪಡಿಸಲಾಗಿದ್ದು, PSC ಪೈಪ್‌ಗಳ ತಯಾರಿಕೆ ಘಟಕಗಳು ವಿರಳವಾಗಿರುವುದರಿಂದ ನಿಗದಿತ ಕಾಲಮಿತಿಯೊಳಗೆ ಸರಬರಾಜು ಮಾಡುವುದು ಕಷ್ಟಕರವಾಗಿದ್ದರಿಂದ, PSC ಪೈಪುಗಳ ಬದಲಿಗೆ MS ಮತ್ತು DI ಪೈಪುಗಳನ್ನು ಅಳವಡಿಸಲು ಯೋಜನೆಯನ್ನು ಮಾರ್ಪಡಿಸಲಾಗಿದ್ದರಿಂದ;<br>• ಪೈಪ್‌ಲೈನ್ ಪಥ ಬದಲಾವಣೆಯಿಂದ ಭೂ ಸ್ವಾಧೀನ ವಿಸ್ತೀರ್ಣವನ್ನು 180 ಎಕರೆಯಿಂದ 30 ಎಕರೆಗೆ (150 ಎಕರೆ ಉಳಿತಾಯ) ಕಡಿಮೆಗೊಳಿಸಿ, ಅಂದರೆ 227.00 ಕಿ.ಮೀ ಉದ್ದದ ಗ್ರಾವಿಟಿ ಮೈನ್ ಪೈಪ್‌ಅನ್ನು ರಸ್ತೆ ಬದಿಯಲ್ಲಿ ಅಳವಡಿಸಲು ಯೋಜನೆಯನ್ನು ಮಾರ್ಪಡಿಸಲಾಗಿದ್ದರಿಂದ;<br>• ಪಂಪ್‌ಹೌಸ್ ಮತ್ತು ವಿದ್ಯುತ್ ಸಬ್‌ಸ್ಟೇಷನ್ ನಿರ್ಮಿಸಲು ಉದ್ದೇಶಿಸಿರುವ, ಸರ್ವೆ ನಂ. 53/1 ರ 3 ಎಕರೆ 15 ಗುಂಟೆ ವಿಸ್ತೀರ್ಣ ಪ್ರದೇಶವು ಖಾಸಗಿ ಜಮೀನಾಗಿದ್ದು, ಭೂ ಮಾಲೀಕರು ಜಮೀನನ್ನು ಬಿಟ್ಟುಕೊಡಲು ಒಪ್ಪದಿದ್ದ ಕಾರಣ ಸಮೀಪದಲ್ಲೇ ಇದ್ದ ಸರ್ಕಾರದ ಕೆರೆಯ ಅಂಗಳಕ್ಕೆ ಸ್ಥಳ ಬದಲಾಯಿಸಿದ್ದರಿಂದ;<br>• Land Acquisition Act 2013ರ ಪ್ರಕಾರ ಎಸ್.ಐ.ಎ ವರದಿ ಅನುಮೋದನೆ ಪಡೆಯುವ ಪ್ರಕ್ರಿಯೆಯು ವಿಳಂಬವಾಗಿರುವುದರಿಂದ;<br><br>ಪ್ರಸ್ತುತ ಈ ಯೋಜನೆಗೆ 28 ಗ್ರಾಮಗಳಿಂದ (ಕುಣಿಗಲ್ ತಾಲ್ಲೂಕಿನ 09 ಗ್ರಾಮಗಳ ಒಟ್ಟು –19 ಎಕರೆ 35 ಗುಂಟೆ ಮತ್ತು ಮಾಗಡಿ ತಾಲ್ಲೂಕಿನ 19 ಗ್ರಾಮಗಳ– 54 ಎಕರೆ 08 ಗುಂಟೆ) ಒಟ್ಟು 74 ಎಕರೆ 03 ಗುಂಟೆ ಭೂಮಿ ಅವಶ್ಯಕವಿದ್ದು, ಕುಣಿಗಲ್ ತಾಲ್ಲೂಕಿನ 9 ಗ್ರಾಮಗಳ ಒಟ್ಟು 19 ಎಕರೆ 35 ಗುಂಟೆ ಮತ್ತು ಮಾಗಡಿ ತಾಲ್ಲೂಕಿನ 18 ಗ್ರಾಮಗಳ 52 ಎಕರೆ 27 ಗುಂಟೆ ಅವಾರ್ಡ್ ಅನುಮೋದನೆಯಾಗಿದ್ದು, ಹಂತ ಹಂತವಾಗಿ ರೈತರಿಗೆ ಭೂ ಪರಿಹಾರ ಧನ ವಿತರಿಸಲಾಗುತ್ತಿದೆ. |
| ಇ) | ಮಾಗಡಿ ತಾಲ್ಲೂಕಿನ ಕೆರೆಗಳಿಗೆ ನೀರಿನ ಬವಣೆ ಹೆಚ್ಚಾಗಿದ್ದು, ಹೇಮಾವತಿ ನದಿಯಿಂದ ನಾಲೆಯ ಮೂಲಕ ಹರಿಸುವ ಕುಡಿಯುವ ನೀರಿನ ಕಾಮಗಾರಿಯು ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿ ಎಷ್ಟು? | ಕ್ರಸಂ. (ಆ)ರಲ್ಲಿ ವಿವರಿಸಿದ ಅನಿವಾರ್ಯ ಕಾರಣಗಳಿಂದ ಕಾಮಗಾರಿಯಲ್ಲಿ ವಿಳಂಬವಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ದಿನಾಂಕ:31-12-2023 ರೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಜಸಂಇ 14 ಎಸ್‌ಎಲ್‌ಎ 2023**

**( ಗೋವಿಂದ ಎಂ. ಕಾರಜೋಳ )**
**ಜಲಸಂಪನ್ಮೂಲ ಸಚಿವರು**